2018 ಕ.ತೀ.ವ. 778

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

ಮುಬೀನ್ ಷರೀಫ್ -ವಿರುದ್ಧ- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ*

ಭಾರತ ಸಂವಿಧಾನ ಅನುಚ್ಛೇದ 226ರ ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಅನುಕಂಪದ ಆಧಾರದ ಮೇಲೆ ತಮಗೆ ಕೆಲಸ ನೀಡಬೇಕೆಂದು ಎದುರುದಾರರಿಗೆ ನಿರ್ದೇಶನ ಕೋರಿ ಸದರಿ ರಿಟ್ ಅರ್ಜಿ ಸಲ್ಲಿಕೆ.

ರಿಟ್ ಅರ್ಜಿದಾರರ ಕುಟುಂಬವು ಆತನ ತಂದೆ ಮೃತಪಟ್ಟ ನಂತರ 19 ವರ್ಷಗಳವರೆಗೆ ಅನುಕಂಪದ ಆಧಾರದ ಮೇಲೆ ಕೆಲಸವಿಲ್ಲದೆಯೇ ನಡೆದುಕೊಂಡು ಬಂದಿದೆ. ರಿಟ್ ಅರ್ಜಿಯನ್ನು ಸಲ್ಲಿಸುವಲ್ಲಿ ಆಗಿರುವ ಕಾಲ ವಿಳಂಬವನ್ನು ಅರ್ಜಿದಾರರು ವಿವರಿಸಿಲ್ಲ. ಈ ಕಾರಣದಿಂದ ಸದರಿ ರಿಟ್ ಅರ್ಜಿಯನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು:* *ಪ್ಯಾರಾಗಳಲ್ಲಿ*

1. *(2006)5 ಎಸ್‌ಸಿಸಿ 766*
   *ಜಮ್ಮು ಮತ್ತು ಕಾಶ್ಮೀರ ರಾಜ್ಯ -ವಿರುದ್ಧ- ಸಾಜದ್ ಅಹ್ಮದ್ ಮೀರ್* *(ಉಲ್ಲೇ) 4*
2. *(2012) 13 ಎಸ್‌ಸಿಸಿ 412*
   *ಚೀಫ್ ಕಮೀಷನರ್ ಆಫ್ ಸೆಂಟ್ರಲ್ ಎಕ್ಸೈಸ್ -ವಿರುದ್ಧ- ಪ್ರಭಾತ್ ಸಿಂಗ್* *(ಉಲ್ಲೇ) 4*

* ರಿಟ್ ಅರ್ಜಿ ಸಂ.919/2011 (ಎಸ್-ಆರ್‌ಇಎಸ್), ದಿನಾಂಕ: 3ನೇ ಏಪ್ರಿಲ್, 2017.

3. *(1994) 4 ಎಸ್‌ಸಿಸಿ 138*
*ಉಮೇಶ್ ಕುಮಾರ್ ನಾಗ್‌ಪಾಲ್*
*-ವಿರುದ್ಧ- ಹರಿಯಾಣ ರಾಜ್ಯ ಮತ್ತು ಇತರರು* *(ಉಲ್ಲೇ) 7*

4. *(1996)1 ಎಸ್‌ಸಿಸಿ 301*
*ಜಗದೀಶ್ ಪ್ರಸಾದ್ -ವಿರುದ್ಧ- ಬಿಹಾರ ರಾಜ್ಯ*
*ಮತ್ತು ಮತ್ತೊಬ್ಬರು* *(ಉಲ್ಲೇ) 8*

5. *(1997) 11 ಎಸ್‌ಸಿಸಿ 390*
*ಮ್ಯಾನೇಜಿಂಗ್ ಡೈರೆಕ್ಟರ್ ಎಂಎಂಟಿಸಿ ಲಿ.,*
*ನವದೆಹಲಿ ಮತ್ತು ಮತ್ತೊಬ್ಬರು -ವಿರುದ್ಧ-*
*ಪ್ರಮೋದಾ ದೇಯ್ ಅಲಿಯಾಸ್ ನಾಯಕ್* *(ಉಲ್ಲೇ) 9*

6. *(1998) 9 ಎಸ್‌ಸಿಸಿ 485*
*ಎಸ್. ಮೋಹನ್ -ವಿರುದ್ಧ-*
*ತಮಿಳುನಾಡು ಸರ್ಕಾರ ಮತ್ತು ಮತ್ತೊಬ್ಬರು* *(ಉಲ್ಲೇ) 10*

7. *(1995) 6 ಎಸ್‌ಸಿಸಿ 476*
*ಭಾರತ ಒಕ್ಕೂಟ -ವಿರುದ್ಧ-*
*ಭಗವಾನ್ ಸಿಂಗ್* *(ಉಲ್ಲೇ) 11*

8. *(1996) 8 ಎಸ್‌ಸಿಸಿ 23*
*ಹರಿಯಾಣ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ*
*-ವಿರುದ್ಧ ನರೇಶ್ ತನ್ವರ್ ಮತ್ತು ಮತ್ತೊಬ್ಬರು* *(ಉಲ್ಲೇ) 12*

9. *(2003) 9 ಎಸ್‌ಸಿಸಿ 247*
*ನಿರ್ದೇಶಕರು, ಡಿಫೆನ್ಸ್ ಮೆಟಲ್ ರಿಸರ್ಚ್*
*ಲ್ಯಾಬೊರೇಟರಿ ಮತ್ತು ಮತ್ತೊಬ್ಬರು*
*-ವಿರುದ್ಧ- ಜಿ. ಮುರಳಿ* *(ಉಲ್ಲೇ) 14*

*10. (2015) 15 ಎಸ್‌ಸಿಸಿ 1*
*ಪ್ರಭಾಕರ –ವಿರುದ್ಧ– ಜಂಟಿ ನಿರ್ದೇಶಕರು,*
*ರೇಷ್ಮೆ ಇಲಾಖೆ (ಉಲ್ಲೇ) 21*
*11. (2012) 7 ಎಸ್‌ಸಿಸಿ 418*
*ಶ್ರೀಜಿತ್ ಎಲ್ –ವಿರುದ್ಧ–*
*ಉಪ ನಿರ್ದೇಶಕರು (ಶಿಕ್ಷಣ), ಕೇರಳ (ಉಲ್ಲೇ) 22*
*12. ಐಎಲ್‌ಆರ್ 2010 ಕೆಎಆರ್ 4041*
*ಶ್ರೀಮತಿ ಸುಲೋಚನಾ ದುತ್ತರ್ಗಿ –ವಿರುದ್ಧ–*
*ವ್ಯವಸ್ಥಾಪಕರು, ನ್ಯಾಷನಲ್ ಇನ್ಸೂರೆನ್ಸ್*
*ಕಂಪನಿ ಲಿಮಿಟೆಡ್ ಮತ್ತು ಇತರರು (ಉಲ್ಲೇ) 25*

ಅರ್ಜಿದಾರರ ಪರ : ಶ್ರೀ ಎಚ್.ಎಂ. ಮುರಳೀಧರ್, ವಕೀಲರು
ಮೆ॥ ಶ್ರೀ ರಂಗಾ ಅಸೋಷಿಯೇಟ್ಸ್ ಪರವಾಗಿ
ಪ್ರತ್ಯರ್ಜಿದಾರರ ಪರ : ಶ್ರೀ ಕೆ. ಕೃಷ್ಣ, ವಕೀಲರು.

## ಆದೇಶ

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ:**

ಅರ್ಜಿದಾರನಿಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಸಂಬಂಧ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸಬೇಕೆಂದು ಎದುರುದಾರನ ವಿರುದ್ಧ ಪರಮಾದೇಶ ಸ್ವರೂಪದಲ್ಲಿ ರಿಟ್ ಕೋರಿ ಈ ರಿಟ್ ಅರ್ಜಿಯನ್ನು 7.1.2011ರಂದು ಸಲ್ಲಿಸಲಾಗಿತ್ತು.

2. ಸಂಕ್ಷಿಪ್ತವಾಗಿ ಪ್ರಕರಣದ ಸಂಗತಿಗಳು ಹೀಗಿವೆ, ಅರ್ಜಿದಾರನ ತಂದೆ ಶ್ರೀ ಅಬ್ದುಲ್ ಷರೀಫ್, 'ಮುಖ್ಯ ಕೂಲಿಕಾರ' ಆಗಿ ಕಾರ್ಯ ನಿರ್ವಹಿಸುತ್ತಿದ್ದು,

ದಿನಾಂಕ 19.01.1998ರಂದು ನಿತ್ಯದ ಕೆಲಸದಲ್ಲಿರುವಾಗ ಮೃತರಾಗಿದ್ದಾರೆ. ಮೃತರ ವಿಧವೆಯು, ಅರ್ಜಿದಾರನಿಗೆ ಉದ್ಯೋಗ ಒದಗಿಸಬೇಕೆಂದು ದಿನಾಂಕ 09.02.1998ರಂದು ಮನವಿಯನ್ನು ಸಲ್ಲಿಸಿದ್ದಾರೆ. ಅರ್ಜಿದಾರನು, 12.10.1999, 23.01.2001, 17.05.2006, 09.02.2009, 18.01.2010 ಮತ್ತು 25.01.2010ರಂದು ಉದ್ಯೋಗ ಒದಗಿಸಬೇಕೆಂದು ಮನವಿಗಳನ್ನು ಸಲ್ಲಿಸಿದ್ದಾರೆ. ಸದರಿ ಮನವಿಗಳನ್ನು ಪರಿಗಣಿಸಿಲ್ಲವೆಂದು ಮತ್ತು ಅನುಕಂಪದ ಆಧಾರದ ಮೇಲೆ ಉದ್ಯೋಗಕ್ಕಾಗಿ ಇತರರು ಮಾಡಿದ ಮನವಿಗಳನ್ನು ಪರಿಗಣಿಸಲಾಗಿತ್ತೆಂದು, ಪಕ್ಷಪಾತದ ತಾರತಮ್ಯವನ್ನು ಆಪಾದಿಸಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು.

3. ಮಾನ್ಯ ವಕೀಲರಾದ ಶ್ರೀ ಎಚ್.ಎಂ. ಮುರಳೀಧರ್‌ರವರು, ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪದ ಆಧಾರದ ಮೇಲಿನ ನೇಮಕಾತಿ) ನಿಯಮಗಳು, 1996ರ (ಸಂಕ್ಷಿಪ್ತತೆಗಾಗಿ 'ನಿಯಮಗಳು') 5ನೇ ನಿಯಮಕ್ಕನುಸಾರವಾಗಿ ಅರ್ಜಿದಾರನು ಅರ್ಜಿಯನ್ನು ಸಲ್ಲಿಸಿರುವನೆಂದು ಮತ್ತು 6ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಈಡೇರಿಸಲಾಗಿದೆಯೆಂದು ಎದುರುದಾರನಿಗೆ, 3 ತಿಂಗಳುಗಳ ಅವಧಿಯೊಳಗೆ ನೇಮಕಾತಿ ಆದೇಶವನ್ನು ಹೊರಡಿಸಬೇಕೆಂದು ನಿವೇದಿಸಿದ್ದಾರೆ. ದಶಕಗಳಿಗಿಂತಲೂ ಹೆಚ್ಚು ಸಮಯ ಕಳೆದು ಹೋಗಿದ್ದರೂ ಕೂಡ, ಪರಿಗಣಿಸದಿರುವುದು, ಅವರ ಮನಬಂದಂತೆ ಮಾಡಿದ ಕಾರ್ಯವಾಗಿದೆಯೆಂದು ನಿವೇದಿಸಿದ್ದಾರೆ. ಹೊಟ್ಟೆ ತುಂಬಿಸುತ್ತಿದ್ದ ಒಬ್ಬನೇ ಒಬ್ಬ ವ್ಯಕ್ತಿ ತನ್ನನ್ನು ಅವಲಂಬಿಸಿದ್ದ ಕುಟುಂಬ ಸದಸ್ಯರನ್ನು ಬಿಟ್ಟು ಮೃತನಾಗಿದ್ದು, ಕ್ರಮಕೈಗೊಳ್ಳದಿರುವುದು ವಾದಿಸಲು ಕಾರಣವಾಗಿದೆಯೆಂದು ನಿವೇದಿಸಿದ್ದಾರೆ. ಇದಕ್ಕೆ ಪೂರಕವಾಗಿ ಈ ಮುಂದಿನ ನಿರ್ಣಯಗಳನ್ನು ಅವಲಂಬಿಸಲಾಗಿತ್ತು:

(i) (1989) 4 ಎಸ್‌ಸಿಸಿ 468:
ಶ್ರೀಮತಿ ಸುಷ್ಮಾ ಗೋಸಾಯಿನ್ –ವಿರುದ್ಧ– ಭಾರತ ಒಕ್ಕೂಟ.

(ii) (1998) 5 ಎಸ್‌ಸಿಸಿ 192:
ಶಿಕ್ಷಣ ನಿರ್ದೇಶಕರು (ಮಾಧ್ಯಮಿಕ) –ವಿರುದ್ಧ– ಪುಷ್ಪೇಂದ್ರ ಕುಮಾರ್.

(iii) ಎಐಆರ್ 2000 ಎಸ್‌ಸಿ 1596:
ಬಲಬೀರ್ ಕೌರ್ –ವಿರುದ್ಧ– ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್.

(iv) 2001 ಎಐಆರ್ ಎಸ್‌ಸಿಡಬ್ಲ್ಯೂ 2386:
ಸೂರ್ಯಕಾಂತ್ ಕಡಮ್ –ವಿರುದ್ಧ– ಕರ್ನಾಟಕ ರಾಜ್ಯ.

(v) ಸಿವಿಲ್ ಅಪೀಲು ಸಂ.260/2008 ದಿನಾಂಕ 15.05.2015
ಕೆನರಾ ಬ್ಯಾಂಕ್ –ವಿರುದ್ಧ– ಎಂ. ಮಹೇಶ್ ಕುಮಾರ್.

(vi) ರಿಟ್ ಅರ್ಜಿ ಸಂಖ್ಯೆ 10490/2008 ಮದ್ರಾಸ್ ಉಚ್ಚ ನ್ಯಾಯಾಲಯ –ವಿರುದ್ಧ– ಸಂಪತ್ –ವಿರುದ್ಧ– ಜಿಲ್ಲಾ ಕಲೆಕ್ಟರು.

(vii) ರಿಟ್ ಅರ್ಜಿ ಸಂಖ್ಯೆ 527/2007 ರಾಜಸ್ಥಾನ ಉಚ್ಚ ನ್ಯಾಯಾಲಯ
ಬಲವೀಂದರ್ ಸಿಂಗ್ –ವಿರುದ್ಧ– ಎಂ.ಡಿ. ಆರ್‌ಎಸ್‌ಆರ್‌ಟಿಸಿ, ಜೈಪುರ್.

4. ಮತ್ತೊಂದು ಕಡೆ ಮಾನ್ಯ ವಕೀಲರಾದ ಶ್ರೀ ಕೆ. ಕೃಷ್ಣರವರು, ಮುಖ್ಯ ಕೂಲಿಯಾಗಿ, ಶ್ರೀ ಅಬ್ದುಲ್ ಸತ್ತಾರ್ ಷರೀಫ್ ಪ್ರಭಾರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅಂಥ ಸಿಬ್ಬಂದಿಯನ್ನು ಅನುಕಂಪದ ಆಧಾರದ ಮೇಲೆ ನೇಮಕ

ಮಾಡಿಕೊಳ್ಳುವುದನ್ನು ನಿಷೇಧಿಸಿರುವ ದಿನಾಂಕ 23.11.1995ರ ಸರ್ಕಾರಿ ಆದೇಶ ಸಂ.ಡಿಪಿಎಆರ್ /2/ ಎಸ್‌ಎಲ್‌ಸಿ 95ನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಕ್ಲೇಮು ಯಾವುದೇ ಅರ್ಹತೆಯನ್ನು ಹೊಂದಿರುವುದಿಲ್ಲವೆಂದು ನಿವೇದಿಸಿದ್ದಾರೆ. ಅವರು, ದಿನಾಂಕ 23.11.1995ರ ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್/2/ಎಸ್‌ಎಲ್‌ಸಿ/95ರ ಪ್ರಕಾರ, ನಿವೃತ್ತಿಯ ಕಾರಣದಿಂದ ಅಥವಾ ಇತರ ಕಾರಣಕ್ಕಾಗಿ ಕೂಡಲೇ ಯಾರೇ ವ್ಯಕ್ತಿಯ ಆ ಹುದ್ದೆಯಿಂದ ತೆರವುಗೊಂಡಲ್ಲಿ ಆ ಸಂಖ್ಯಾತಿರಿಕ್ತ ಹುದ್ದೆಯು ರದ್ದುಗೊಳ್ಳುತ್ತದೆಂದು ನಿವೇದಿಸಿದ್ದಾರೆ. ಅವರು, ಸಂಖ್ಯಾತಿರಿಕ್ತ ಹುದ್ದೆಯು, ಸಂಬಂಧಪಟ್ಟ ನೌಕರನಿಗಾಗಿ ಹಂಗಾಮಿಯಾಗಿ ಮಾಡಲಾಗಿರುತ್ತದೆ ಮತ್ತು ಅಂಥ ಹುದ್ದೆ/ವ್ಯಕ್ತಿಯ ಸಂಬಂಧದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದಿಲ್ಲ ಎಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಸುಮಾರು ಎರಡು ದಶಕಗಳು ಎಂದರೆ ಅಂದಿನಿಂದ ಇಲ್ಲಿಯವರೆಗೆ ಪರಮಾದೇಶ ಸ್ವರೂಪದಲ್ಲಿ ರಿಟ್ ಅನ್ನು ಹೊರಡಿಸುವ ಸಂಬಂಧ ಸಲ್ಲಿಸಲಾದ ಅರ್ಜಿಯನ್ನು ತಳ್ಳಿಹಾಕಲಾಗಿದೆಯೆಂದು ನಿವೇದಿಸಿದ್ದಾರೆ. ಮೃತರ ಕುಟುಂಬ ಸುಮಾರು ಎರಡು ದಶಕಗಳ ಅವಧಿಯನ್ನು ಕಳೆದಿದ್ದು, ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು ಒದಗಿಸುವುದು ವಿಷಯವೇ ಅಲ್ಲವೆಂದು ಹೀಗಾಗಿ ಅರ್ಜಿಯು ಯಶಸ್ಸು ಗಳಿಸುವುದಲ್ಲಿ ವಿಫಲವಾಗಿದೆಯೆಂದು ನಿವೇದಿಸಿದ್ದಾರೆ. ***ಜಮ್ಮು ಮತ್ತು ಕಾಶ್ಮೀರ ರಾಜ್ಯ -ವಿರುದ್ಧ- ಸಾಜದ್ ಅಹ್ಮದ್ ಮೀರ್*** [1] ; ***ಚೀಫ್ ಕಮೀಷನರ್ ಆಫ್ ಸೆಂಟ್ರಲ್ ಎಕ್ಸೈಸ್ -ವಿರುದ್ಧ- ಪ್ರಭಾತ್ ಸಿಂಗ್*** [2] ಪ್ರಕರಣಗಳಲ್ಲಿರುವ ನಿರ್ಣಯಗಳನ್ನು ಅವಲಂಬಿಸಿದ್ದಾರೆ.

5. ಪರಿಗಣನೆಗೆ ತೆಗೆದುಕೊಂಡಿರುವ ಅಂಶ ಯಾವುದೆಂದರೆ, ಅರ್ಜಿದಾರನ ತಂದೆಯ ಮರಣವಾದ ದಿನಾಂಕದಿಂದ ಸುಮಾರು ಹತ್ತೊಂಬತ್ತು ವರ್ಷಗಳ ಅವಧಿ ಸಂದಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು, ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು ನೀಡಲು ಕ್ಲೇಮು ಮಾಡಿರುವುದನ್ನು ಪರಿಗಣಿಸಲು ಎದುರುದಾರನ ವಿರುದ್ಧ ಪರಮಾದೇಶ ರಿಟ್ ಅನ್ನು ಹೊರಡಿಸಬಹುದೇ? ಎಂಬುದಾಗಿದೆ.

1. (2006)5 ಎಸ್‌ಸಿಸಿ 766
2. (2012) 13 ಎಸ್‌ಸಿಸಿ 412

6. ಕೆಲಸ ಮಾಡುತ್ತಿರುವಾಗ ನೌಕರನು ಮೃತನಾಗಿದ್ದ ಪಕ್ಷದಲ್ಲಿ, ಅನುಕಂಪದ ನೇಮಕಾತಿಯ ಯೋಜನೆಯ ಅಡಿಯಲ್ಲಿ, ಅರ್ಹ ಅವಲಂಬಿತನಿಗೆ ಉದ್ಯೋಗವನ್ನು ನೀಡಬಹುದು. ಅಂಥ ಕ್ರಮದ ಹಿಂದಿನ ಉದ್ದೇಶ, ಹೊಟ್ಟೆ ಹೊರೆಯಲು ಕಾರಣವಾಗಿದ್ದ ವ್ಯಕ್ತಿಯು ಮೃತನಾದ ಕಾರಣದಿಂದ ಉಂಟಾದ ಆರ್ಥಿಕ ಸ್ಥಿತಿಯನ್ನು ಕೂಡಲೇ ಗುರುತಿಸಿ ಕುಟುಂಬಕ್ಕೆ ತಕ್ಷಣ ಒತ್ತಾಸೆ ನೀಡುವುದಾಗಿದೆ. ನೌಕರನು ಮೃತನಾದ ಹಲವಾರು ವರ್ಷಗಳ ನಂತರ ಉದ್ಯೋಗವನ್ನು ನೀಡುವುದು ಸಂವಿಧಾನದ 14 ಮತ್ತು 16ನೇ ಖಂಡಗಳಿಗೆ ನೇರವಾಗಿ ವಿರುದ್ಧವಾಗುತ್ತದೆ. ಅಂಥ ನೇಮಕಾತಿಯನ್ನು ಸರಿಯಾದ ವಿಷಯವೆಂದು ಕ್ಲೇಮು ಮಾಡಲಾಗುವುದಿಲ್ಲ. ಸರ್ಕಾರಿ ನೌಕರನ ಮರಣ ಸಂಭವಿಸಿರುವುದನ್ನೇ, ಸರ್ಕಾರಿ ಕಚೇರಿಯಲ್ಲಿ ಉದ್ಯೋಗ ಪಡೆದುಕೊಳ್ಳುವ ಹಕ್ಕು ಎಂದು ಭಾವಿಸಲು ಸಾಧ್ಯವಿಲ್ಲ. ಅನುಕಂಪದ ಆಧಾರದ ಮೇಲಿನ ಉದ್ಯೋಗವು ಕ್ರಮದ ವಿಷಯವೆಂದು ಭಾವಿಸಲು ಸಾಧ್ಯವಿಲ್ಲ ಮತ್ತು ಭಾವಿಸಬಾರದು. ಅಂಥ ಉದ್ಯೋಗ ಒದಗಿಸುವ ಯೋಜನೆ ಮತ್ತು ಅಂಥ ವಿಷಯಗಳಲ್ಲಿ ವಿಧಿಸಲಾದ ಕಾನೂನಿನ ಅನುಪಾತವನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಕಳೆದುಹೋದ ಅವಧಿಯೂ ಕೂಡ ಒಂದು ಸಂಗತಿಯಾಗಿದೆ ಮತ್ತು ಗೌಣ ಸಂಗತಿಯಾಗುತ್ತದೆ.

7. ***ಉಮೇಶ್ ಕುಮಾರ್ ನಾಗ್‌ಪಾಲ್ –ವಿರುದ್ಧ– ಹರಿಯಾಣ ರಾಜ್ಯ ಮತ್ತು ಇತರರು*** [3], ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ಅನುಕಂಪದ ಆಧಾರದ ಮೇಲಿನ ಉದ್ಯೋಗವನ್ನು ಯುಕ್ತ ಅವಧಿ ಕಳೆದುಹೋದ ನಂತರ ನೀಡಲಾಗುವುದಿಲ್ಲ ಇದನ್ನು ನಿಯಮಗಳಲ್ಲಿ ನಿರ್ದಿಷ್ಟಪಡಿಸಬೇಕು. ಅಂಥ ಉದ್ಯೋಗದ ಪರಿಗಣನೆ ಭವಿಷ್ಯದಲ್ಲಿ ಯಾವುದೇ ಸಮಯದಲ್ಲಿ ಚಲಾಯಿಸಬಹುದೆನ್ನುವ ನಿಹಿತ ಹಕ್ಕಾಗಿರುವುದಿಲ್ಲ. ಒಬ್ಬನೇ

3. (1994) 4 ಎಸ್‌ಸಿಸಿ 138

ಒಬ್ಬ ಹೊಟ್ಟೆ ತುಂಬಿಸುವ ಕಾಯಕ ಮಾಡುವ ವ್ಯಕ್ತಿಯು ಮರಣ ಹೊಂದಿದ ಸಮಯದಲ್ಲಿ ಆರ್ಥಿಕ ಸಂಕಷ್ಟದಿಂದ ಪಾರಾಗಲು ಕುಟುಂಬವನ್ನು ಸಮರ್ಥಗೊಳಿಸುವ ಉದ್ದೇಶವನ್ನು ಇದು ಹೊಂದಿದ್ದು, ಎಷ್ಟೊಂದು ಸಮಯ ಕಳೆದ ನಂತರ ಸಂಕಷ್ಟದಿಂದ ಪಾರಾದ ನಂತರ ಅನುಕಂಪದ ಆಧಾರದ ಉದ್ಯೋಗವನ್ನು ಕ್ಲೇಮು ಮಾಡಲಾಗುವುದಿಲ್ಲ ಮತ್ತು ನೀಡಲು ಸಾಧ್ಯವಿಲ್ಲ.''

(ಒತ್ತು ನೀಡಲಾಗಿದೆ)

8. ***ಜಗದೀಶ್ ಪ್ರಸಾದ್ -ವಿರುದ್ಧ- ಬಿಹಾರ ರಾಜ್ಯ ಮತ್ತು ಮತ್ತೊಬ್ಬರು*** [4] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

''ಉದ್ಯೋಗದಲ್ಲಿ ನಿರತನಾಗಿದ್ದ ಮೃತ ನೌಕರನ ಅವಲಂಬಿತರನ್ನು ನೇಮಕ ಮಾಡಿಕೊಳ್ಳುವ ಉದ್ದೇಶವು, ಅನಿರೀಕ್ಷಿತವಾಗಿ ಎದುರಾದ ಸಂಕಷ್ಟದಿಂದ ಮತ್ತು ಕುಟುಂಬದಲ್ಲಿ ಸಂಪಾದಿಸುತ್ತಿದ್ದ ವ್ಯಕ್ತಿಯು ದಿಢೀರ್ ಮರಣದಿಂದಾಗಿ ಕುಟುಂಬಕ್ಕೆ ಆದ ಸಂಕಷ್ಟದಿಂದ ಪಾರು ಮಾಡುವುದಾಗಿದೆ''.

(ಒತ್ತು ನೀಡಲಾಗಿದೆ)

9. ***ಮ್ಯಾನೇಜಿಂಗ್ ಡೈರೆಕ್ಟರ್ ಎಂಎಂಟಿಸಿ ಲಿ., ನವದೆಹಲಿ ಮತ್ತು ಮತ್ತೊಬ್ಬರು -ವಿರುದ್ಧ- ಪ್ರಮೋದಾ ದೇಯ್ ಅಲಿಯಾಸ್ ನಾಯಕ್*** [5] ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

4. (1996)1 ಎಸ್‌ಸಿಸಿ 301
5. (1997) 11 ಎಸ್‌ಸಿಸಿ 390

> "4. . . . . . . . ಈ ನ್ಯಾಯಾಲಯವು ಎತ್ತಿತೋರಿಸಲಾದಂತೆ ಅನುಕಂಪದ ಆಧಾರದ ಮೇಲಿನ ನೇಮಕಾತಿಯ ಉದ್ದೇಶವು, ತಕ್ಷಣದ ಆರ್ಥಿಕ ಬಿಕ್ಕಟ್ಟನ್ನು ನಿಭಾಯಿಸಲು ಮೃತ ನೌಕರನ ಬಡ ಕುಟುಂಬವನ್ನು ಶಕ್ತಗೊಳಿಸುವುದಾಗಿದೆಯೇ ಹೊರತು, ಉದ್ಯೋಗ ಕಲ್ಪಿಸುವುದಲ್ಲ ಮತ್ತು ನೌಕರನ ಮರಣದ ಮಾತ್ರದಿಂದಲೇ ಅವನ ಕುಟುಂಬ ಅನುಕಂಪದ ಉದ್ಯೋಗಕ್ಕೆ ಹಕ್ಕುಳ್ಳದ್ದಾಗಿರುವುದಿಲ್ಲ . . . ."
>
> (ಒತ್ತು ನೀಡಲಾಗಿದೆ)

10. ***ಎಸ್. ಮೋಹನ್ -ವಿರುದ್ಧ- ತಮಿಳುನಾಡು ಸರ್ಕಾರ ಮತ್ತು ಮತ್ತೊಬ್ಬರು*** [6] ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ಜೀವನೋಪಾಯಕ್ಕೆ ಕಾರಣನಾಗಿದ್ದ ಒಬ್ಬನೇ ಒಬ್ಬ ಆ ವ್ಯಕ್ತಿಯು ಮರಣಹೊಂದಿದ ಸಮಯದಲ್ಲಿ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, ಅದರಿಂದ ಪಾರಾಗಲು ಕುಟುಂಬವನ್ನು ಶಕ್ತಗೊಳಿಸುವುದು ಇದರ ಉದ್ದೇಶವಾಗಿದ್ದು, ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು ಕ್ಲೇಮು ಮಾಡಲಾಗುವುದಿಲ್ಲ ಮತ್ತು ಎಷ್ಟೋಂದು ಸಮಯ ಕಳೆಯದಿದ್ದರೂ, ಸಂಕಷ್ಟ ಮುಗಿದ ನಂತರವೂ ನೀಡುವಂಥದಲ್ಲ".

11. ***ಭಾರತ ಒಕ್ಕೂಟ -ವಿರುದ್ಧ- ಭಗವಾನ್ ಸಿಂಗ್*** [7] ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

---

6. (1998) 9 ಎಸ್‌ಸಿಸಿ 485

7. (1995) 6 ಎಸ್‌ಸಿಸಿ 476

"ಇದು, ತಕ್ಷಣದ ಬಿಕ್ಕಟ್ಟು ಅಥವಾ ಸಂಕಷ್ಟದಿಂದ ಪಾರಾಗಲು ಅನುಕಂಪದ ಆಧಾರದ ಉದ್ಯೋಗಕ್ಕೆ ಸಂಬಂಧಿಸಿದ ಕುಟುಂಬವನ್ನು ಶಕ್ತಗೊಳಿಸುವುದಲ್ಲ, ಇದು ಸೆಪ್ಟೆಂಬರ್ 1972ಕ್ಕು ಮೊದಲೇ ಇದು ನಡೆದಿರುತ್ತದೆ. ಆ ಸಮಯದಲ್ಲಿ, ಸೆಪ್ಟೆಂಬರ್ 12, 1972ರಂದು ಮರಣಹೊಂದಿದ್ದು, ಅವನಿಗೆ ವಯಸ್ಕ ಇಬ್ಬರು ವಯಸ್ಕ ಮಕ್ಕಳು ಮತ್ತು ಮಕ್ಕಳ ತಾಯಿ ಇದ್ದು, ಅವರು, ಕುಟುಂಬದ ಅಗತ್ಯಗಳನ್ನು ಭರಿಸಿಕೊಳ್ಳಲು ಸಮರ್ಥರಾಗಿದ್ದರು ಹಾಗೆಯೇ ಅವರು ಅನುಕಂಪದ ಆಧಾರದ ಮೇಲೆ ಯಾವುದೇ ಉದ್ಯೋಗಕ್ಕೆ ಅರ್ಜಿಯನ್ನು ಸಲ್ಲಿಸಿರಲಿಲ್ಲ. ಸುಮಾರು 20 ವರ್ಷಗಳ ಅವಧಿಯಲ್ಲಿ ಯಾವುದೇ ಕಠಿಣ ಸಮಸ್ಯೆಯಿಲ್ಲದೆ ಕುಟುಂಬವನ್ನು ದೂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ನಾವು, ಕೇಂದ್ರ ಆಡಳಿತಾತ್ಮಕ ನ್ಯಾಯಾಧಿಕರಣವು ಕಾನೂನುಬಾಹಿರವಾಗಿ ಮತ್ತು ಅನುಕಂಪದ ಆಧಾರದ ಮೇಲೆ ಉದ್ಯೋಗ ಕಲ್ಪಿಸುವುದಕ್ಕೆ ಎದುರುದಾರನ ಪ್ರಕರಣವನ್ನು ಪರಿಗಣಿಸಲು ಮತ್ತು ಅವನು ಸೂಕ್ತವೆಂದು ಭಾವಿಸಿದರೆ, ಉದ್ಯೋಗವನ್ನು ಒದಗಿಸಲು ಪ್ರಾಧಿಕಾರಗಳನ್ನು ನಿರ್ದೇಶಿಸುವಲ್ಲಿ ಸಂಪೂರ್ಣ ಅಧಿಕಾರವ್ಯಾಪ್ತಿಯಿಲ್ಲದೆ ವರ್ತಿಸಿದೆಯೆಂದು ಅಭಿಪ್ರಾಯಪಡುತ್ತೇವೆ."

(ಒತ್ತು ನೀಡಲಾಗಿದೆ)

12. ***ಹರಿಯಾಣ ರಾಜ್ಯ ವಿದ್ಯುಚ್ಛಕ್ತಿ ಮಂಡಳಿ -ವಿರುದ್ಧ- ನರೇಶ್ ತನ್ವರ್ ಮತ್ತು ಮತ್ತೊಬ್ಬರು*** [8] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:-

8. (1996) 8 ಎಸ್‌ಸಿಸಿ 23

> "9. ಉಮೇಶ್ ಕುಮಾರ್ ನಾಗ್‌ಪಾಲ್ –ವಿರುದ್ಧ– ಹರಿಯಾಣ ರಾಜ್ಯ (ನಿರ್ಣಯದಲ್ಲಿ, ಅನುಕಂಪ ಆಧಾರಿತ ಉದ್ಯೋಗವನ್ನು ಯುಕ್ತ ಅವಧಿ ಕಳೆದುಹೋದ ದೀರ್ಘಾವಧಿಯ ನಂತರ ನೀಡಲು ಸಾಧ್ಯವಿಲ್ಲ ಮತ್ತು ಅನುಕಂಪ ಆಧಾರಿತ ಉದ್ಯೋಗದ ಉದ್ದೇಶವು, ಮುಕ್ತ ನೇಮಕಾತಿಯ ಸಾಮಾನ್ಯ ನಿಯಮಕ್ಕೆ ಹೊರತಾಗಿದ್ದು, ಮೃತ ನೌಕರನ ಕುಟುಂಬದ ಸದಸ್ಯರು ಅನುಭವಿಸುತ್ತಿರುವ ತಕ್ಷಣದ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ಉದ್ದೇಶಿಸಿದೆ ಎಂಬುದನ್ನು ಸೂಚಿಸುತ್ತದೆ. ಜಗದೀಶ್ ಪ್ರಸಾದ್ ರವರ ಪ್ರಕರಣದಲ್ಲಿ ಈ ನ್ಯಾಯಾಲಯದ ಇತರ ನಿರ್ಣಯದಲ್ಲಿ, ಕೆಲಸದಲ್ಲಿರುವಾಗ ಮರಣ ಹೊಂದಿದ ಮೃತ ನೌಕರನ ಅವಲಂಬಿತರಿಗೆ ಉದ್ಯೋಗ ನೀಡುವ ಪ್ರಸ್ತುತ ಉದ್ದೇಶವು, ಕುಟುಂಬದಲ್ಲಿ ಸಂಪಾದಿಸುತ್ತಿದ್ದ ಸದಸ್ಯರ ತಕ್ಷಣದ ಮರಣದಿಂದ ಕುಟುಂಬಕ್ಕೆ ಆದ ಆರ್ಥಿಕ ಸಂಕಷ್ಟ ಮತ್ತು ಬಿಕ್ಕಟ್ಟಿನಿಂದ ಪಾರು ಮಾಡುವುದಾಗಿದ್ದು, ಅಂಥ ಪರಿಗಣನೆಯನ್ನು ಸುಮಾರು ವರ್ಷಗಳವರೆಗೆ ಬಂಧಕವಾಗಿ ಇಡಲು ಸಾಧ್ಯವಿಲ್ಲವೆಂದು ಸಹ ಸೂಚಿಸಿದೆ."
>
> (ಒತ್ತು ನೀಡಲಾಗಿದೆ)

13. ***ಜಮ್ಮು ಮತ್ತು ಕಾಶ್ಮೀರ ರಾಜ್ಯ ಮತ್ತು ಇತರರು –ವಿರುದ್ಧ– ಸಾಜದ್ ಅಹ್ಮದ್ ಮಿರ್ (ಮೇಲಿನಂತೆ)*** ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "11. . . . . . . ಸಾಮಾನ್ಯವಾಗಿ, ಸರ್ಕಾರ ಅಥವಾ ಇತರ ಸಾರ್ವಜನಿಕ ವಲಯಗಳಲ್ಲಿರುವ ಉದ್ಯೋಗವು ಅರ್ಜಿ

ಹಾಕಲು ಮುಂದೆ ಬರುವ ಅರ್ಹ ಅಭ್ಯರ್ಥಿಗಳೆಲ್ಲರಿಗೂ ಮುಕ್ತವಾಗಿರಬೇಕು ಮತ್ತು ಒಬ್ಬರು ಇನ್ನೊಬ್ಬರನ್ನು ಪರಸ್ಪರ ಸ್ಪರ್ಧಿಸುವರು, ಸ್ಪರ್ಧಾತ್ಮಕ ಅರ್ಹತೆಗಳ ಆಧಾರದ ಮೇಲೆ, ಸಾರ್ವಜನಿಕ ಕಚೇರಿಯಲ್ಲಿ ಉದ್ಯೋಗವನ್ನು ನೀಡಬೇಕು. ಸಂಪಾದಿಸುವವರ ಮರಣ ಮತ್ತು ಬಡತನದಿಂದಾಗಿ ಆರ್ಥಿಕ ಸಂಕಷ್ಟಕ್ಕೀಡಾದ ಕಾರಣದಿಂದ ಕುಟುಂಬದ ಜೀವನೋಪಾಯದಂಥ ಅಂಶಗಳನ್ನು ಒತ್ತಾಯಪಡಿಸುವ ಸಾಂದರ್ಭಿಕ ಬೇಡಿಕೆ ಹೊರತುಪಡಿಸಿದರೆ ಈ ಸಾಮಾನ್ಯ ನಿಯಮವನ್ನು ಬದಲಾಯಿಸಲಾಗುವುದಿಲ್ಲ. ಜೀವನ ಸಾಗಿಸಲು ಕಾರಣನಾದ ವ್ಯಕ್ತಿಯು ಮರಣ ಸಂಭವಿಸಿದರೂ ಕುಟುಂಬ ಮೊದಲಿನಂತಾಗಿ, ಅಂಥ ಅವಧಿಯಿಂದ ಹೊರಬರುವುದನ್ನು, ಇದು ರುಜುವಾತುಪಡಿಸುತ್ತದೆ ನೇಮಕಾತಿಯ ಸಾಮಾನ್ಯ ನಿಯಮಕ್ಕೆ 'ಗುಡ್ ಬೈ' ಹೇಳುವ ಅಗತ್ಯವಿರುವುದಿಲ್ಲ ಮತ್ತು ಸಂವಿಧಾನದ 14ನೇ ಅನುಚ್ಛೇದದ ಆಜ್ಞೆಯನ್ನು ನಿರಾಕರಿಸಿ ಕೆಲವು ಇತರರ ಹಿತಾಸಕ್ತಿಗಳಿಗೆ ಒಬ್ಬರಿಗೇ ಪಕ್ಷಪಾತ ತೋರಿಸುವುದು."

(ಒತ್ತು ನೀಡಲಾಗಿದೆ)

14. ***ನಿರ್ದೇಶಕರು, ಡಿಫೆನ್ಸ್ ಮೆಟಲ್ ರಿಸರ್ಚ್ ಲ್ಯಾಬೊರೇಟರಿ ಮತ್ತು ಮತ್ತೊಬ್ಬರು -ವಿರುದ್ಧ- ಜಿ. ಮುರಳಿ*** [9] ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"4. ನ್ಯಾಯಾಧಿಕರಣದ ಆದೇಶದಲ್ಲಿ ಯಾವುದೇ ದುರ್ಬಲತೆ ಅಥವಾ ತಾಂತ್ರಿಕತೆಗಳನ್ನು ನಾವು ಗುರುತಿಸಿಲ್ಲ.

9. (2003) 9 ಎಸ್‌ಸಿಸಿ 247

> ವಾಸ್ತವವಾಗಿ, ಉಚ್ಚ ನ್ಯಾಯಾಲಯದ ಆದೇಶವು ಸಮರ್ಥನೀಯವಾಗಿಲ್ಲವೆಂಬುದನ್ನು ನಾವು ಗುರುತಿಸಿದ್ದೇವೆ. ನ್ಯಾಯಾಲಯವು ಯಾವುದನ್ನು ಸರಿಯಾಗಿ ಲೆಕ್ಕಕ್ಕೆ ತೆಗೆದುಕೊಂಡಿದೆ ಎಂಬುದನ್ನು ನಿರ್ಣಯಿಸಲು ವಿಫಲವಾಗಿದೆ, ಎಂದರೆ, ರಿಟ್ ಅರ್ಜಿದಾರ ಮತ್ತು ಅವನ ಕುಟುಂಬವನ್ನು ಹದಿನೆಂಟು ವರ್ಷಗಳ ಅವಧಿಯವರೆಗಿನ ಅನುಕಂಪದ ಆಧಾರವಿಲ್ಲದೆ ನಿರ್ವಹಿಸಲಾಗಿದೆ. ಅನುಕಂಪದ ಆಧಾರದ ಮೇಲೆ ರಿಟ್ ಅರ್ಜಿದಾರನ ನೇಮಕಾತಿಯನ್ನು ನಿರ್ದೇಶಿಸುವುದಕ್ಕೆ ಮತ್ತು ಅವನಿಗೆ ಹುದ್ದೆಯ ಅವಕಾಶವನ್ನು ಸೃಜಿಸಲು ರಿಟ್ ಅರ್ಜಿಗೆ ಎದುರುದಾರನಿಗೆ ಸೂಚನೆ ನೀಡುವ ಮೂಲಕವೂ ಸಹ ಸಂಬಂಧಿಸಿದಂಥ ಸನ್ನಿವೇಶಗಳಲ್ಲಿ ಯಾವುದೇ ವಾರಂಟು ಇರಲಿಲ್ಲ."
>
> (ಒತ್ತು ನೀಡಲಾಗಿದೆ)

15. ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರನ ತಂದೆ 19.01.1998ರಂದು ಮೃತನಾಗಿದ್ದು, ಅರ್ಜಿದಾರನಿಗೆ ಉದ್ಯೋಗ ಒದಗಿಸಬೇಕೆಂದು 09.02.1998ರಂದು ಮನವಿಯನ್ನು ಮಾಡಿಕೊಂಡಿದ್ದನು. ಅರ್ಜಿಯನ್ನು ಸಲ್ಲಿಸಿ ಸುಮಾರು ಹನ್ನೆರಡಕ್ಕಿಂತಲೂ ಹೆಚ್ಚಿನ ವರ್ಷಗಳ ಅವಧಿ ಕಳೆದಿತ್ತು. ಅರ್ಜಿದಾರನ ತಂದೆ ಮರಣ ಹೊಂದಿದ ದಿನಾಂಕದಿಂದ, ಈ ಅರ್ಜಿಯನ್ನು ಸಲ್ಲಿಸುವ ದಿನಾಂಕದವರೆಗಿನ 12ಕ್ಕಿಂತಲೂ ಹೆಚ್ಚಿನ ವರ್ಷಗಳ ನಡುವಿನ ಅವಧಿಯಲ್ಲಿ, 6 ವರ್ಷಗಳಿಗೂ ಹೆಚ್ಚಿನ ವರ್ಷಗಳು ಕಳೆದಿದ್ದು, ಎದುರುದಾರನನ್ನು ಕ್ಲೇಮು ಮಾಡುವುದನ್ನು ಪರಿಗಣಿಸಲು ಸೂಚಿಸಿದರೆ, ಅನುಕಂಪದ ಅಧಾರಗಳ ಮೇಲೆ ಹುದ್ದೆಯನ್ನು ನೀಡುವ ಯೋಜನೆಯ ಮೂಲ ಧ್ಯೇಯೋದ್ದೇಶ ಈಡೇರುವುದಿಲ್ಲ. ಮೃತನ ಕುಟುಂಬವು ಇಂದಿನವರೆಗೆ ಹತ್ತೊಂಬತ್ತು ವರ್ಷಗಳಿಗಿಂತಲೂ ಹೆಚ್ಚು ಅವಧಿಯವರೆಗೆ ಜೀವನ ಸಾಗಿಸಿದ್ದು, ಹಾಗೆಯೇ ಪರಮಾದೇಶ ರಿಟ್ ಅನ್ನು ಹೊರಡಿಸಲು ಯಾವುದೇ ಸಮರ್ಥನೆಯಿರುವುದಿಲ್ಲ.

16. ಯಾವ ತತ್ವಗಳ ಮೇಲೆ ಪರಮಾದೇಶ ರಿಟ್ ಅನ್ನು ಹೊರಡಿಸಬಹುದೋ ಅವುಗಳನ್ನು ಗ್ರಂಥದಲ್ಲಿ ತಿಳಿಸಲಾಗಿದೆ. ಎಫ್.ಜಿ. ಫೆರ್ರಿಸ್ ಮತ್ತು ಎಫ್.ಜಿ. ಫೆರ್ರಿಸ್‌ರವರ The Law of Extraordinary Legal Remedies ನಲ್ಲಿ ಈ ಮುಂದಿನಂತಿದೆ:

> "ಟಿಪ್ಪಣಿ 196 – ಪರಮಾದೇಶವು ರಿಟ್ ಹಕ್ಕಲ್ಲ. ಇದನ್ನು ಹೊರಡಿಸುವುದನ್ನು ಪ್ರಶ್ನಾತೀತವಾಗಿ, ನ್ಯಾಯಾಲಯದ ನ್ಯಾಯಿಕ ವಿವೇಚನೆಯನುಸಾರ ಇರಿಸಲಾಗಿದ್ದು, ವಸ್ತುವು ನಿರ್ವಿವಾದಿತ ತತ್ವಗಳಿಂದ ಕೂಡಿದ್ದ, ಇದನ್ನು ನ್ಯಾಯಾಲಯಗಳು ದೃಢಪಡಿಸಿವೆ. ಪರಮಾದೇಶದ ಕ್ರಮವನ್ನು ಸಾಮಾನ್ಯ ವ್ಯಾಜ್ಯದ ತತ್ವಗಳ ಮೂಲಕ ರೂಪಿಸಿರುವುದಿಲ್ಲ. ಇಲ್ಲಿ ಆಪಾದಿತ ವಿಷಯಗಳು ಒಂದು ಕಡೆಯಲ್ಲಿದ್ದು, ಮತ್ತೊಂದು ಕಡೆ ನಿರಾಕರಿಸದಿರುವುದನ್ನು ಸತ್ಯವೆಂದು ಸ್ವೀಕರಿಸಲಾಗಿದೆ ಮತ್ತು ಆ ಕ್ರಮದಂತೆ ತೀರ್ಪನ್ನು ಉದ್ಘೋಷಿಸಲಾಗಿದೆ. ಪರಮಾದೇಶವನ್ನು ಕಾನೂನು ಪರಿಹಾರವೆಂದು ವಿಭಾಗಿಸುವಾಗ, ಇದನ್ನು ಹೊರಡಿಸುವುದನ್ನು ನ್ಯಾಯಸಮ್ಮತ ತತ್ವಗಳ ಮೂಲಕ ದೀರ್ಘವಾಗಿ ನಿಯಂತ್ರಿಸಲಾಗುತ್ತದೆ."

17. ಶ್ರೀ ಎಚ್.ಎಂ. ಮುರಳೀಧರ್‌ರವರು, ಯಾವುದೇ ಕಾಲವನ್ನು, ಕಳೆಯದೆ ನೇಮಕಾತಿಗಾಗಿ ಕ್ಲೇಮು ಮಾಡಿದ್ದರೂ, ಎದುರುದಾರನು ಸಕ್ರಿಯನಾಗಿರುವುದಿಲ್ಲ. ಅರ್ಜಿದಾರನಿಗೆ ತೊಂದರೆಯಾಗುವುದಿಲ್ಲವೆಂದು ವಾದಿಸಿದ್ದಾರೆ. ಅವರು, ಎದುರುದಾರನು, ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲವಾಗುವುದರ ಅನುಕೂಲವನ್ನು ಪಡೆದುಕೊಳ್ಳಲು ಅನುಮತಿಸಿಲ್ಲವೆಂದು, 12.10.1999ರಿಂದ 25.01.2010ರ ವರೆಗೆ ಹಲವಾರು ಮನವಿಗಳನ್ನು ಸಲ್ಲಿಸುವ ಮೂಲಕ ವಾಸ್ತವಿಕವಾಗಿ ವರ್ತಿಸಿದ್ದನೆಂದೂ ಸಹ ನಿವೇದಿಸಿದ್ದಾರೆ.

18. ಶ್ರೀ ಕೆ. ಕೃಷ್ಣರವರು, ಅರ್ಜಿದಾರನಿಗೆ ದಿನಾಂಕ 16.01.2003ರಂದು ದಾಖಲೆಯನ್ನು ಹಾಜರುಪಡಿಸಲು ಸೂಚಿಸಲಾಗಿತ್ತು ಎಂದು ನಿವೇದಿಸಿದ್ದಾರೆ. ಅನಧಿಕೃತ ಟಿಪ್ಪಣಿ ಪ್ರಕಾರ, ಅರ್ಜಿದಾರನನ್ನು ಕ್ಲೇಮನ್ನು ಪರಿಗಣಿಸಲು ದಿನಾಂಕ 17.01.2007ರಂದು ಹಾಜರಾಗಲು ಸೂಚಿಸಲಾಗಿತ್ತು. ಅರ್ಜಿದಾರನು ದಿನಾಂಕ 25.04.1971ರಂದು ಜನಿಸಿದ್ದು, ಈಗ ಅವನಿಗೆ 46 ವರ್ಷಗಳಾಗಿವೆ ಮತ್ತು ನೇಮಕಾತಿಗೆ ಬೇಕಾದ ಗರಿಷ್ಠ ವಯೋಮಿತಿಯನ್ನು ದಾಟಿರುವನೆಂಬುದನ್ನು ಗುರುತಿಸಿದ್ದಾರೆ. ಅರ್ಜಿದಾರನು, ನ್ಯಾಯಸಮ್ಮತ ಪರಿಗಣನೆಗೂ ಸಹ ಅವನ ಬಳಿ ಯಾವುದೇ ಅಂಶವಿಲ್ಲವಾಗಿದ್ದು, ಅರ್ಜಿ ತಿರಸ್ಕೃತವಾಗಿದೆಯೆಂದು ನಿವೇದಿಸಿದ್ದಾರೆ.

19. ಮೊದಲ ಮನವಿಯನ್ನು ದಿನಾಂಕ 9.2.1998ರಂದು ಸಲ್ಲಿಸುವಾಗ, ಅರ್ಜಿದಾರನು ಅರ್ಹವಲಯದೊಳಗೆ ಸುರಕ್ಷಿತವಾಗಿದ್ದನು ಹೀಗಾಗಿ, ಅದರ ನಿಷ್ಕ್ರಿಯತೆಯ ಕಾರಣದಿಂದ ಅರ್ಜಿದಾರನಿಗೆ ನೇಮಕಾತಿಯನ್ನು ನಿರಾಕರಿಸಲು ಎದುರುದಾರನಿಗೆ ಮುಕ್ತವಾಗಿರುವುದಿಲ್ಲವೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು, ಯಾವ ದಿನಾಂಕದಂದು ಮನವಿಯನ್ನು ಮಾಡಿರುವರೋ ಅದು, ದಿನಾಂಕ 19.02.1998 ಆಗಿದ್ದು ಅದಕ್ಕೆ ಸಂಬಂಧಪಟ್ಟ ಅಂಶವನ್ನು ಅರ್ಜಿದಾರನ ವಯಸ್ಸಿನೊಂದಿಗೆ ಲೆಕ್ಕಹಾಕಬೇಕು ಎಂದು ಮತ್ತು ಪ್ರಸ್ತುತ ದಿನಾಂಕಕ್ಕೆ ಸಂಬಂಧಪಡುವುದಿಲ್ಲವೆಂದು ನಿವೇದಿಸಿದ್ದಾರೆ. ಅರ್ಜಿದಾರನು, ಆರು ವರ್ಷಗಳಿಗೂ ಹೆಚ್ಚು ಕಾಲ ಅರ್ಜಿಯನ್ನು ಹಾಕುವಲ್ಲಿ ವಿಳೆ ಮಾಡಿರುವುದಕ್ಕೆ ಕಾರಣನಾಗಿರುವುದಿಲ್ಲವೆಂದು ಅವರು ನಿವೇದಿಸಿದ್ದಾರೆ.

20. ಅರ್ಜಿದಾರನ ತಂದೆ ಮರಣಹೊಂದಿದ ದಿನಾಂಕದಂದು, ಅರ್ಜಿದಾರನಿಗೆ ಸುಮಾರು 28 ವರ್ಷ ವಯಸ್ಸಾಗಿತ್ತು. ಅರ್ಜಿಯನ್ನು 09.02.1998ರಂದು ಸಲ್ಲಿಸಿದ್ದರೂ, ಇದಾದ ನಂತರ 19 ವರ್ಷಗಳಿಗೂ ಹೆಚ್ಚಿನ ಅವಧಿ ಕಳೆದುಹೋಗಿದ್ದು, ವಿಷಯವು ಹಳತಾಗಿದೆ. ಮನವಿಯನ್ನು ಸಲ್ಲಿಸಿದ ಅಥವಾ ನೆನಪೋಲೆಯನ್ನು ಸಲ್ಲಿಸಿದ ಮಾತ್ರಕ್ಕೆ ಸಮಯವನ್ನು ತಡೆಹಿಡಿದಿಡಲಾಗಿಲ್ಲ. ಅರ್ಜಿದಾರನು ಮೈಮರೆತ, ಸುಮಾರು 12 ವರ್ಷಗಳು ಕಳೆದುಹೋದ ನಂತರ ಈ ನ್ಯಾಯಾಲಯದ ಮೊರೆ ಹೋಗಿದ್ದಾನೆ.

ಇಲ್ಲಿಯವರೆಗೆ ಸುಮಾರು 19 ವರ್ಷಗಳ ಅವಧಿ ಅಡ್ಡವಾಗಿದೆ. ವಿಳಂಬ ಅಥವಾ ತಡೆದಿರುವಿಕೆಗೆ ಸಂಬಂಧಪಟ್ಟ ಸಂಗತಿಯಾಗಿದ್ದು ಇದನ್ನು ಕಣ್ಣಿಂದ ಮರೆಮಾಚಲಾಗುವುದಿಲ್ಲ. ಸಮಾನತೆಯ ಕಲ್ಪನೆಯನ್ನಾಧರಿಸಿದ ಅನುಕಂಪ ಆಧಾರಿತ ನೇಮಕಾತಿಯ ಕ್ಲೇಮನ್ನು, ದೃಢಪ್ರಯತ್ನದಿಂದ ಬೆಂಬತ್ತಿದ್ದರೆ, ದೀರ್ಘಾವಧಿಯ ಅಡ್ಡದಾರಿ ಹಿಡಿದಿರುವ ಕಾರಣದಿಂದ 226ನೇ ಅನುಚ್ಛೇದದ ಮೇರೆಗೆ ವಿಶೇಷವಾದ ಅಧಿಕಾರದ ಚಲಾವಣೆಗೆ ಯಾವುದೇ ಸಮರ್ಥನೆ ಇರುವುದಿಲ್ಲ ಮತ್ತು ಪರಮಾದೇಶ ರಿಟ್ ಅನ್ನು ಹೊರಡಿಸಲಾಗುವುದಿಲ್ಲ. ರಿಟ್ ಅಧಿಕಾರ ವ್ಯಾಪ್ತಿಯ ಚಲಾವಣೆಯು ವಿವೇಚನೆಗೆ ಬಿಟ್ಟಿದ್ದುದಾಗಿದ್ದು, ರಿಟ್ ನ್ಯಾಯಾಲಯವು ರಿಟ್ ಮಾತ್ರದಿಂದಲೇ ಹೊರಡಿಸಲು ಬದ್ಧವಾಗಿರುವುದಿಲ್ಲ. ಏಕೆಂದರೆ ಇದನ್ನು ಹಾಗೆ ಮಾಡುವುದು ಕಾನೂನು ಸಮ್ಮತವಾಗಿರುತ್ತದೆ. ಮನವಿಯನ್ನು ಸಲ್ಲಿಸಿದ ನಂತರ ಯುಕ್ತ ಅವಧಿಯೊಳಗೆ ಕಾನೂನು ಪರಿಹಾರ ಲಭ್ಯವಾಗದಿದ್ದಲ್ಲಿ ಅರ್ಜಿದಾರನ ಕಡೆಯಿಂದಾದ ನಿಧಾನಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಪ್ರಕರಣವನ್ನು ಪರಿಗಣಿಸಲು ಇಷ್ಟು ದೀರ್ಘಾವಧಿಯಲ್ಲಿ ಎದುರುದಾರನನ್ನು ಒತ್ತಾಯಪಡಿಸುವ ಸಮರ್ಥನೆಯಿರುವುದಿಲ್ಲ.

21. ಕಾಲಾವಧಿ ಮಿತಿಯನ್ನು ಉಪಬಂಧಿಸಿಲ್ಲದಿರುವಲ್ಲಿಯೂ ಆದ ನಿಧಾನಗತಿ, ವಿಳಂಬ ಮತ್ತು ಮೌನಕ್ಕೆ ಸಂಬಂಧಪಟ್ಟ ವಿಷಯವನ್ನು ವಿಚಾರಣೆ ಮಾಡುತ್ತಿರುವಾಗ, ***ಪ್ರಭಾಕರ -ವಿರುದ್ಧ- ಜಂಟಿ ನಿರ್ದೇಶಕರು, ರೇಷ್ಮೆ ಇಲಾಖೆ*** [10]**,** ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "38. ದೀರ್ಘಕಾಲಾವಧಿಯಲ್ಲಿ ಚಲಾಯಿಸಲಾಗದ ಹಕ್ಕು ಅಸ್ತಿತ್ವದಲ್ಲಿರುವುದಿಲ್ಲವೆನ್ನುವುದು ಈಗ ನ್ಯಾಯಶಾಸ್ತ್ರದ ಸುಸ್ಪಷ್ಟ ತತ್ವವಾಗಿದೆ. ಕೆಲವು ವ್ಯವಹರಣೆಗಳಿಗೆ ಸಂಬಂಧಪಟ್ಟ

10. (2015) 15 ಎಸ್‌ಸಿಸಿ 1

ಯಾವುದೇ ಪರಿನಿಯಮದ ಮೂಲಕ ನಿಯಮಿಸಲಾದ ಪರಿಮಿತ ಅವಧಿ ಇಲ್ಲದಿರುವಾಗ, ಅಂಥ ಸಂದರ್ಭಗಳಲ್ಲಿ, ನ್ಯಾಯಾಲಯಗಳು, ನಿಧಾನಗತಿ ಮತ್ತು ವಿಳಂಬದ ತತ್ವಗಳನ್ನು ಮತ್ತು ಮೌನ ಸಮ್ಮತಿಯ ಸಿದ್ಧಾಂತಗಳನ್ನು ಸೃಜಿಸುತ್ತವೆ ಯುಕ್ತವಲ್ಲದ ವಿಳಂಬ ಮಾಡಿದ ನಂತರ ಕ್ರಮವನ್ನು ಕೈಗೊಳ್ಳುವುದರ ಸಂಬಂಧ ಯಾವುದೇ ಸಮರ್ಥನೀಯವಾದ ವಿವರಣೆಯಿಲ್ಲದೆ ತಡವಾಗಿ ನ್ಯಾಯಾಲಯದ ಮೊರೆಹೋಗಿರುವ ಹೊಂದಿಕೆಯಾಗದ ವ್ಯಾಜ್ಯಕಾರರ ದಾವೆಯನ್ನು ರದ್ದುಪಡಿಸುತ್ತವೆ. ವಾಸ್ತವವಾಗಿ ವಿಳಂಬದ ಸಿದ್ಧಾಂತಗಳು 'ಡಿಲೆ ಡಿಫೀಟ್ಸ್ ಈಕ್ವಿಟೀಸ್' ಎಂಬ ಸಮನ್ಯಾಯದ ಸೂತ್ರದ ಅನ್ವಯಗಳಾಗಿವೆ."

39. ಈ ತತ್ವಗಳನ್ನು ಆ ಪ್ರಕರಣಗಳಿಗೆ ಅನ್ವಯಿಸಲಾಗಿದ್ದು, ಇಲ್ಲಿ ನ್ಯಾಯಾಲಯದ ವಿವೇಚನಾ ಆದೇಶಗಳನ್ನು ಕ್ಲೇಮು ಮಾಡಲಾಗಿದೆ. ಹಾಗೆಯೇ ನಿರ್ದಿಷ್ಟ ನಿರ್ವಹಣೆ, ಶಾಶ್ವತ ಅಥವಾ ತಾತ್ಕಾಲಿಕ ನಿರ್ಬಂಧಕಾಜ್ಞೆ, ಸ್ವೀಕರ್ತನ ನೇಮಕಾತಿ ಮುಂತಾದವು. ಈ ತತ್ವಗಳನ್ನು, ಭಾರತ ಸಂವಿಧಾನದ 32 ಮತ್ತು 226ನೇ ಅನುಚ್ಛೇದಗಳ ಮೇರೆಗೆ ಸಲ್ಲಿಸಲಾದ ರಿಟ್ ಅರ್ಜಿಗಳಲ್ಲಿ ಸಹ ಅನ್ವಯಿಸಲಾಗಿದೆ. ಅಂಥ ಪ್ರಕರಣಗಳಲ್ಲಿ, ನ್ಯಾಯಾಲಯಗಳು, ಪರಿಹಾರವನ್ನೂ ತಿರಸ್ಕರಿಸುತ್ತವೆ, ಅರ್ಜಿದಾರನ ಕಡೆಯಿಂದ ಆದ ವಿಳಂಬವು ಪೂರ್ವಾಗ್ರಹದಿಂದ ಕೂಡಿದ್ದಲ್ಲಿ, ಎದುರುದಾರನಾದರೂ ಅರ್ಜಿದಾರನಾದರೂ ಪರಿಮಿತಿ ಅಧಿನಿಯಮವು ನಿಯಮಿಸಲಾದ ಅವಧಿಯೊಳಗೆ ನ್ಯಾಯಾಲಯಕ್ಕೆ ಬರಬಹುದಾಗಿರುತ್ತದೆ."

(ಒತ್ತು ನೀಡಲಾಗಿದೆ)

22. ***ಶ್ರೀಜಿತ್ ಎಲ್ -ವಿರುದ್ಧ- ಉಪ ನಿರ್ದೇಶಕರು (ಶಿಕ್ಷಣ), ಕೇರಳ*** [11] ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಅರ್ಜಿದಾರರು ವಿವಾಹವಾಗಿ ಪ್ರತ್ಯೇಕ ಕುಟುಂಬವಿರುವ ಅವಳ ಗಂಡನೊಂದಿಗೆ ಉಳಿದುಕೊಂಡಿರುವರು ಎಂಬ ಸಂಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ತುಂಬಾ ಮಹತ್ವಪೂರ್ಣವಾದ ಅಂಶದೊಂದಿಗೆ ವಿಳಂಬವನ್ನು ಒಪ್ಪಿಕೊಂಡಿದ್ದು, ಅಂಥ ವ್ಯಕ್ತಿಯ ನೇಮಕಾತಿಯನ್ನು, ಮೃತರನ್ನು ಅವಲಂಬಿಸಿರುವ ಕುಟುಂಬದ ಇತರ ಸದಸ್ಯರಿಗೆ ಯಾವುದೇ ಆರ್ಥಿಕ ಸಹಾಯ ಮಾಡುವ ದೃಷ್ಟಿಯಲ್ಲಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ. 14 ವರ್ಷಗಳಿಗಿಂತ ಹೆಚ್ಚಾಗಿರುವ ಅವಧಿಯನ್ನು ಗಮನಿಸಿ, ಅನುಕಂಪದ ಆಧಾರದ ಉದ್ಯೋಗಕ್ಕಾಗಿ ಮನವಿ ಸಲ್ಲಿಸುವುದು ಮಾರಕವೆಂದು ಅಭಿಪ್ರಾಯಪಟ್ಟಿದೆ.

23. ಪ್ರಸ್ತುತ ಪ್ರಕರಣದಲ್ಲಿ, ಮೃತರ ಕುಟುಂಬವು, ಜೀವನ ದೂಡುತ್ತಿದ್ದವರ ಹಠಾತ್ ಮರಣದ ಕಾರಣದಿಂದ ಸಂಕಷ್ಟಕ್ಕೀಡಾಗಿದ್ದರೆ ತುರ್ತು ಉದ್ಯೋಗದ ಅಗತ್ಯವಿದ್ದರೆ, ಉದ್ಯೋಗವನ್ನು ಒದಗಿಸುವ ಅರ್ಜಿಯನ್ನು ಸಲ್ಲಿಸುವುದರಲ್ಲಿ ಮತ್ತು ಮನವಿಗಳನ್ನು ಅನುಸರಿಸುವಲ್ಲಿ ತೃಪ್ತಿ ಹೊಂದಿರುವುದಿಲ್ಲ. ಯುಕ್ತ ಅವಧಿಯೊಳಗೆ ಎದುರುದಾರನು ಕಾನೂನುಸಮ್ಮತ ಕ್ರಮ ಕೈಗೊಳ್ಳದಿದ್ದರೆ, ಅರ್ಜಿದಾರನು ಕಾನೂನಾತ್ಮಕ ಪರಿಹಾರವನ್ನು ಹೊಂದಿರುತ್ತಿದ್ದ, ಇದರಲ್ಲಿ ವಿವರಿಸಲಾಗದ ವಿಳಂಬ ಮತ್ತು ನಿಧಾನಗತಿ ಕೂಡ ಆಗಿದೆ. ನ್ಯಾಯಸಮ್ಮತ ಪರಿಹಾರವನ್ನು ಕೋರುವಲ್ಲಿ ವಿಳಂಬವಾದ ಕಾರಣದಿಂದ, ಪರಮಾದೇಶ ರಿಟ್ ಅನ್ನು ಹೊರಡಿಸಲು ಸಾಧ್ಯವಿಲ್ಲ.

24. ಅರ್ಜಿದಾರ ಮತ್ತು ಅವನ ಕುಟುಂಬ ಸುಮಾರು 19 ವರ್ಷಗಳ ಕಾಲ ಅನುಕಂಪ ಆಧಾರದ ಉದ್ಯೋಗವಿಲ್ಲದೆ ನಿಭಾಯಿಸಿದೆ. ಅರ್ಜಿದಾರನು ವಿವಾಹವಾಗಿದ್ದು, ಮಕ್ಕಳಿವೆ, ಅರ್ಜಿದಾರನ ತಂದೆ ಬದುಕಿದ್ದರೆ, ದೀರ್ಘಕಾಲದಲ್ಲೇ ವಯೋನಿವೃತ್ತಿ ಹೊಂದಿರುತ್ತಿದ್ದ. ಹೀಗಾಗಿ, ಅರ್ಜಿದಾರನ ಕ್ಲೇಮನ್ನು ಪರಿಗಣಿಸಲು ಎದುರುದಾರನಿಗೆ ಪರಮಾದೇಶ ರಿಟ್ ಅನ್ನು ಹೊರಡಿಸುವುದನ್ನು

11. (2012) 7 ಎಸ್‌ಸಿಸಿ 418

ಸಮರ್ಥಿಸಲಾಗುವುದಿಲ್ಲ. ಉದ್ಯೋಗವನ್ನು ಒದಗಿಸುವ ವಿಷಯದಲ್ಲಿ ಎದುರುದಾರನು ಏನಾದರೂ ತಾರತಮ್ಯವೆಸಗಿದರೆ ಎಂದರೆ, ಅರ್ಜಿದಾರನ ಕ್ಲೇಮನ್ನು ನಿರ್ಲಕ್ಷಿಸಿ ಇತರ ವ್ಯಕ್ತಿಗಳಿಗೆ ಉದ್ಯೋಗವನ್ನು ಒದಗಿಸಿದರೆ, ಅರ್ಜಿದಾರನು ಪರಿಹಾರವನ್ನು ಕೋರಬೇಕು. ಆಗ, ಅಂಥ ಉದ್ಯೋಗವನ್ನು ನೀಡಿದರೆ, ಪುನರಾವರ್ತಿತ ಮನವಿಗಳ ನಿವೇದನೆಯೊಂದಿಗೆ ವಾದಿಸಲಾಗುವುದಿಲ್ಲ.

25. ***ಶ್ರೀಮತಿ ಸುಲೋಚನಾ ದುತ್ತರ್ಗಿ –ವಿರುದ್ಧ– ವ್ಯವಸ್ಥಾಪಕರು, ನ್ಯಾಷನಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್ ಮತ್ತು ಇತರರು*** [12], ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

> "8. ನಿರ್ವಿವಾದವಾಗಿ, ನಮ್ಮ ಮುಂದಿರುವ ಈ ಪ್ರಕರಣದಲ್ಲಿ, ನೌಕರನ ಮರಣದ ದಿನಾಂಕ 08.04.1994 ಆಗಿದ್ದು, ಆ ದಿನಾಂಕದಂದು, ಮೃತರ ಮಗನಿಗೆ (ಗಿರೀಶ್ ಕುಮಾರ್) ಸುಮಾರು ಐದು ವರ್ಷಗಳಾಗಿದ್ದವು. ತುಂಬಾ ಸಮಯ ಕಳೆದ ನಂತರ ಎಂದರೆ ಸುಮಾರು 16 ವರ್ಷಗಳಾದ ಮೇಲೆ ಅರ್ಜಿದಾರರು, ಅನುಕಂಪದ ಆಧಾರದ ಮೇಲೆ, ಅವಳ ಮಗ ಶ್ರೀ ಗಿರೀಶ್ ಕುಮಾರನ ನೇಮಕಾತಿಗಾಗಿ ಅವಳ ಅರ್ಜಿಯನ್ನು ಪರಿಗಣಿಸಲು ಎದುರುದಾರನಿಗೆ ನಿರ್ದೇಶಿಸಲು ಪರಮಾದೇಶ ರಿಟ್ ಅನ್ನು ಕೋರಿ ಈ ನ್ಯಾಯಾಲಯದ ಮುಂದೆ ಬಂದಿದ್ದಾಳೆ. ಎದುರುದಾರರು, ದಿನಾಂಕ 8.7.2004ರ ಅನುಬಂಧ ಜೆ ಯಲ್ಲಿರುವಂತೆ ಮಾಹಿತಿಯನ್ನು ಕಳುಹಿಸಿತ್ತು. ಇದಾದನಂತರ, ಅರ್ಜಿದಾರನು ಈ ರಿಟ್ ಅರ್ಜಿಯನ್ನು ಸಲ್ಲಿಸಲು ಮತ್ತೂ ಆರು ವರ್ಷಗಳನ್ನು ತೆಗೆದುಕೊಂಡಿದ್ದಾನೆ. ಹಾಗೆಯೇ ರಿಟ್ ಅರ್ಜಿಯನ್ನು, ವಿಳಂಬ

12. ಐಎಲ್ಆರ್ 2010 ಕೆಎಆರ್ 4041

> ಮತ್ತು ನಿಧಾನಗತಿಯ ಕಾರಣದಿಂದ ಭರವಸೆಯಿಲ್ಲದೆ, ಪ್ರತಿಬಂಧಿಸಲಾಗಿದೆ. ಅನುಕಂಪ ಆಧಾರಿತ ಉದ್ಯೋಗವನ್ನು ಒದಗಿಸುವ ಧ್ಯೇಯೋದ್ದೇಶವನ್ನು ಇಟ್ಟುಕೊಂಡು 16 ವರ್ಷಗಳು ಕಳೆದಿವೆ ಮತ್ತು ಮೇಲೆ ಉಲ್ಲೇಖಿಸಲಾದ ನಿರ್ಣಯಗಳ ಸಂಗ್ರಹದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವಿಧಿಸಿದ ಸೂತ್ರವು, ಅರ್ಜಿದಾರನ ಕೋರಿಕೆಯುನ್ನು ಸಮ್ಮತಿಸುವುದಿಲ್ಲ."

ಹಿಂದಿನ ಚರ್ಚೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು ಒದಗಿಸಲು ಅರ್ಜಿದಾರನು ಮಾಡಿದ ಕ್ಲೇಮನ್ನು ಪರಿಗಣಿಸಲು ಎದುರುದಾರನಿಗೆ ಪ್ರತಿಯಾಗಿ ನಿರ್ದೇಶನವನ್ನು ನೀಡುವ ಯಾವುದೇ ಸಮರ್ಥನೆಯಿರುವುದಿಲ್ಲ. ತತ್ಪರಿಣಾಮವಾಗಿ, ಅರ್ಜಿಯನ್ನು ವಜಾ ಮಾಡಿದ್ದು, ವೆಚ್ಚಗಳ ಸಂಬಂಧದಲ್ಲಿ ಯಾವುದೇ ಆದೇಶವಿರುವುದಿಲ್ಲ.